# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.** | : | 144 (138). |
| **ಸದಸ್ಯರ ಹೆಸರು.** | : | ಶ್ರೀ. ಪ್ರಕಾಶ ಕೆ, ರಾಥೋಡ್ (ನಾಮ ನಿರ್ದೇಶನ ಹೊಂದಿದವರು). |
| **ಉತ್ತರಿಸಬೇಕಾದ ದಿನಾಂಕ.** | : | 05.12.2023. |
| **ಉತ್ತರಿಸಬೇಕಾದವರು.** | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ವಿಜಯಪುರ ಜಿಲ್ಲೆಯ ನಗರಸಭೆ, ಪುರಸಭೆ ಮತ್ತು ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು; | ಕಳೆದ 3 ವರ್ಷಗಳಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ವಿಜಯಪುರ ಜಿಲ್ಲೆಯ ನಗರಸಭೆ, ಪುರಸಭೆ ಮತ್ತು ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| (ಆ) | ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ನಿಗಧಿಪಡಿಸಿರುವ ಅವಧಿಯ ವಿವರ ನೀಡುವುದು; | |
| (ಇ) | ಕಾಮಗಾರಿಯು ಪೂರ್ಣಗೊಳ್ಳದಿರುವ ಬಗ್ಗೆ ಕಾರಣ ಹಾಗೂ ಟೆಂಡರ್ ದಾರರ ವಿರುದ್ಧ ಕೈಗೊಂಡಿರುವ ಕ್ರಮದ ಬಗ್ಗೆ ಸಂಪೂರ್ಣ ವಿವರ ನೀಡುವುದು? | |

ಸಂಖ್ಯೆ: ನಅಇ 79 ಯುಎಂಎಸ್ 2023

4/12/2023

(ಸುರೇಶ್ ಬಿ.ಎಸ್)
ನಗರಾಭಿವೃದ್ಧಿ ಮತ್ತು ನಗರ
ಯೋಜನೆ ಸಚಿವರು

ಕಳೆದ 3 ವರ್ಷಗಳಿಂದ ಕನಸೀನ ಮತ್ತು ಒಚ ಮಂಡಳಿಯಿಂದ ವಿಜಯಪುರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಂಡಿರುವ ಕಾಮಗಾರಿಯ ವಿವರಗಳು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 144(138)

| ಕ್ರ. ಸಂ. | ಸ್ಥಳೀಯ ಸಂಸ್ಥೆ | ಕಾಮಗಾರಿ | ಕಾಮಗಾರಿಗೆ ನಿಗದಿಪಡಿಸಿದ ಅವಧಿ (ದಿ.... ರಿಂದ ... ವರೆಗೆ) | ಕಾಮಗಾರಿ ಪೂರ್ಣಗೊಂಡಿದೆಯೇ? ಇಲ್ಲದಿದ್ದಲ್ಲಿ ಪೂರ್ಣಗೊಳ್ಳದಿರಲು ಕಾರಣ ಮತ್ತು ಟೆಂಡರ್ ದಾರರ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ. |
|---|---|---|---|---|
| | **2020-21** | | | |
| 1 | ಸಿಂದಗಿ ಪುರಸಭೆ | ಸಿಂದಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆ (ಪ್ಯಾ-1) | 03.12.2019 ರಿಂದ 02.12.2022 ವರೆಗೆ (36 ತಿಂಗಳುಗಳು) | • ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಕಾರಣಗಳು ಕೆಳಗಿನಂತಿವೆ.<br>1) ಅಡಿಗಲ್ಲು ಸಮಾರಂಭ ವಿಳಂಬವಾಗಿದ್ದರಿಂದ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಿರುತ್ತದೆ.<br>2) ಕೋವಿಡ್ 19 ಸಾಂಕ್ರಾಮಿಕ ರೋಗ ದೇಶವ್ಯಾಪಿ ಹರಡಿದ್ದರಿಂದ ಕೆಲಸ ಸ್ಥಗಿತಗೊಳಿಸಲಾಗಿತ್ತು.<br>3)ಗುತ್ತಿಗೆದಾರರ ಮಂದಗತಿ ಪ್ರಗತಿ.<br>• ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಟೆಂಡರ್ ದಾರರಿಗೆ ಕಾಲಕಾಲಕ್ಕೆ ಹಲವಾರು ನೋಟೀಸ್ ಗಳನ್ನು ನೀಡಲಾಗಿರುತ್ತದೆ. |
| 2 | ದೇವರಹಿಪ್ಪರಗಿ ಪಟ್ಟಣ ಪಂಚಾಯತ | ದೇವರಹಿಪ್ಪರಗಿ ಪಟ್ಟಣದ ನಗರೋತ್ಥಾನ 3ನೇ ಹಂತದ ಠೇವಣಿ ಕೊಡುಗೆ ಕಾಮಗಾರಿಯಡಿ, ಪಟ್ಟಣದಲ್ಲಿ 5.00 ಲ.ಲೀ. ಮತ್ತು 2.50 ಲ.ಲೀ ಸಾಮರ್ಥ್ಯದ ಮೇಲ್ಮಟ್ಟ ಜಲಸಂಗ್ರಹಗಾರ ನಿರ್ಮಿಸುವ ಕಾಮಗಾರಿ | 10.10.2018 ರಿಂದ 09.07.2019 ವರೆಗೆ (9 ತಿಂಗಳುಗಳು) | • ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಕಾರಣಗಳು ಕೆಳಗಿನಂತಿವೆ.<br>1) ಕೋವಿಡ್ 19 ಸಾಂಕ್ರಾಮಿಕ ರೋಗ ದೇಶವ್ಯಾಪಿ ಹರಡಿದ್ದರಿಂದ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು.<br>2) ಕಾಮಗಾರಿಯನ್ನು ಕೈಗೊಳ್ಳಲು ಸಾರ್ವಜನಿಕರು ಅಡ್ಡಿಪಡಿಸಿದ್ದರಿಂದ<br>3) ಕೋವಿಡ್ 19 2ನೇ ಅಲೆ ಸಾಂಕ್ರಾಮಿಕ ರೋಗ ಹರಿಡಿದ್ದರಿಂದ ಲಿಂಕಿಂಗ್ ಮತ್ತು ವೆಲ್ಡಿಂಗ್ ಕಾಮಗಾರಿಗಾರಿಗಳಿಗೆ ಆಮ್ಲಜನಕ ಸಿಲಿಂಡರ್ ಗಳು ಲಭ್ಯವಾಗದ ಕಾರಣ ಮತ್ತು ಅಂತರ ರಾಜ್ಯ ಜನರ ಸಂಚಾರ ಸ್ಥಗಿತಗೊಂಡ ಕಾರಣ ವಿಳಂಬವಾಗಿರುತ್ತದೆ<br>3)2023 ನೇ ಸಾಲಿನ ಸಾರ್ವತ್ರಿಕ ಚುನಾವಣೆಯಿಂದ ನೀತಿ ಸಂಹಿತೆ ಜಾರಿ<br>4)ಗುತ್ತಿಗೆದಾರರ ಮಂದಗತಿ ಪ್ರಗತಿ<br>• ಕಾಲಕಾಲಕ್ಕೆ ಟೆಂಡರ್ ದಾರರಿಗೆ ನೋಟೀಸ್ ಗಳನ್ನು ನೀಡಲಾಗಿದ್ದು.ಟೆಂಡರ್ ನಿಯಮಾನುಸಾರ ದಂಡ ವಿಧಿಸಲಾಗಿದೆ. |
| | **2021-22** | ------ | | |
| | **2022-23** | | | |

| ಕ್ರ. ಸಂ. | ಸ್ಥಳೀಯ ಸಂಸ್ಥೆ | ಕಾಮಗಾರಿ | ಕಾಮಗಾರಿಗೆ ನಿಗದಿಪಡಿಸಿದ ಅವಧಿ (ದಿ.... ರಿಂದ ... ವರೆಗೆ) | ಕಾಮಗಾರಿ ಪೂರ್ಣಗೊಂಡಿದೆಯೇ? ಇಲ್ಲದಿದ್ದಲ್ಲಿ ಪೂರ್ಣಗೊಳ್ಳದಿರಲು ಕಾರಣ ಮತ್ತು ಟೆಂಡರ್ ದಾರರ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ. |
|---|---|---|---|---|
| 1 | ಸಿಂದಗಿ ಪುರಸಭೆ | ಸಿಂದಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆ ಅಡಿಯಲ್ಲಿ ಸಿಂದಗಿ ಪಟ್ಟಣದ ಝೋನ್ 1&2 ಕ್ಕೆ ನಾನ್ ಕ್ಲಾಗ್ ಸೀವೇಜ್ ಪಂಪಿಂಗ್ ಮಶೀನರಿಗಳನ್ನು ಒದಗಿಸಿ, ಅಳವಡಿಸುವ ಕಾಮಗಾರಿ | 23.06.2023 ರಿಂದ 22.10.2023 ವರೆಗೆ (4 ತಿಂಗಳುಗಳು) | • ಕಾಮಗಾರಿ ಪ್ರಾರಂಬಿಸಿರುವುದಿಲ್ಲ.<br>• ಸಿಂದಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆ (ಪ್ಯಾ-1) ಮುಖ್ಯ ಸಿವ್ಹಿಲ್ ಕಾಮಗಾರಿಗಳು ಪೂರ್ಣಗೊಂಡ ನಂತರ ಸದರಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು |
| 2 | ಸಿಂದಗಿ ಪುರಸಭೆ | ಸಿಂದಗಿ ಪಟ್ಟಣದ ಒಳಚರಂಡಿ ಯೋಜನೆಯಡಿ, ಈ ಕೆಳಕಂಡ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಮಾಡುವ ಕಾಮಗಾರಿಗಳು i)ಪಟ್ಟಣದ ಹಳೆ ರಂಭಾಪುರ ರಸ್ತೆಯ ಮಲೀನ ನೀರು ಶುದ್ಧೀಕರಣ ಘಟಕದಲ್ಲಿ ನಿರ್ಮಿಸಿರುವ ವೆಟ್‌ವೆಲ್‌ಗೆ 120 ಹೆಚ್.ಪಿ. ಸಾಮರ್ಥ್ಯದ ನಾನ್‌ಕ್ಲಾಗ್ ಸೀವೇಜ್ ಪಂಪುಗಳು ಹಾಗೂ ಇನ್ನಿತರ ಘಟಕಗಳಿಗೆ ವಿದ್ಯುತ್ ಸರಬರಾಜು ಮಾಡುವ ಕಾಮಗಾರಿ ಹಾಗೂ ii)ಪಟ್ಟಣದ ವಿಜಯಪುರ ರಸ್ತೆಯಲ್ಲಿ ನಿರ್ಮಿಸಿರುವ ವೆಟ್‌ವೆಲ್‌ಗೆ 75 ಹೆಚ್.ಪಿ. ಸಾಮರ್ಥ್ಯದ ನಾನ್‌ಕ್ಲಾಗ್ ಸೀವೇಜ್ ಪಂಪುಗಳು ಹಾಗೂ ಇನ್ನಿತರ ಘಟಕಗಳಿಗೆ ವಿದ್ಯುತ್ ಸರಬರಾಜು ಮಾಡುವ | 26.05.2023 ರಿಂದ 25.08.2023 ವರೆಗೆ (3 ತಿಂಗಳುಗಳು) | • ಕಾಮಗಾರಿ ಪ್ರಾರಂಬಿಸಿರುವುದಿಲ್ಲ.<br>• ಸಿಂದಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆ (ಪ್ಯಾ-1) ಮುಖ್ಯ ಸಿವ್ಹಿಲ್ ಕಾಮಗಾರಿಗಳು ಪೂರ್ಣಗೊಂಡ ನಂತರ ಸದರಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು |
| 3 | ಇಂಡಿ ಪುರಸಭೆ | ಅಮೃತ್ 2.0 ಯೋಜನೆಯಡಿ ಇಂಡಿ ಪಟ್ಟಣದ ವಾರ್ಡ ನಂ. 20, 22 & 23 ಗಳಲ್ಲಿ ಬರುವ ತಾಂಡಾಗಳಿಗೆ ನೀರು ಸರಬರಾಜು ವಿತರಣಾ ಜಾಲ ವ್ಯವಸ್ಥೆ ಕಲ್ಪಿಸುವ | 27.03.2023 ರಿಂದ 26.03.2024 ವರೆಗೆ (12 ತಿಂಗಳುಗಳು) | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 4 | ದೇವರಹಿಪ್ಪರಗಿ ಪಟ್ಟಣ ಪಂಚಾಯತ | ಅಮೃತ್ 2.0 ಯೋಜನೆಯಡಿ ದೇವರಹಿಪ್ಪರಗಿ ಪಟ್ಟಣಕ್ಕೆ ನೀರು ಸರಬರಾಜು ವಿತರಣಾ ಜಾಲ ವ್ಯವಸ್ಥೆ ಕಲ್ಪಿಸುವ ಯೋಜನೆ | 28.03.2023 ರಿಂದ 27.09.2024 ವರೆಗೆ (18 ತಿಂಗಳುಗಳು) | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 5 | ಮನಗೂಳಿ ಪಟ್ಟಣ ಪಂಚಾಯತ | ಅಮೃತ್ 2.0 ಯೋಜನೆಯಡಿ ಮನಗೂಳಿ ಪಟ್ಟಣಕ್ಕೆ ನೀರು ಸರಬರಾಜು ವಿತರಣಾ ಜಾಲ ವ್ಯವಸ್ಥೆ ಕಲ್ಪಿಸುವ ಯೋಜನೆ | 28.03.2023 ರಿಂದ 27.09.2024 ವರೆಗೆ (18 ತಿಂಗಳುಗಳು) | ಕಾಮಗಾರಿ ಪ್ರಗತಿಯಲ್ಲಿರುತ್ತದೆ |

| ಕ್ರ. ಸಂ. | ಸ್ಥಳೀಯ ಸಂಸ್ಥೆ | ಕಾಮಗಾರಿ | ಕಾಮಗಾರಿಗೆ ನಿಗದಿಪಡಿಸಿದ ಅವಧಿ (ದಿ.... ರಿಂದ ... ವರೆಗೆ) | ಕಾಮಗಾರಿ ಪೂರ್ಣಗೊಂಡಿದೆಯೇ? ಇಲ್ಲದಿದ್ದಲ್ಲಿ ಪೂರ್ಣಗೊಳ್ಳದಿರಲು ಕಾರಣ ಮತ್ತು ಟೆಂಡರ್ ದಾರರ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ. |
|---|---|---|---|---|
| 6 | ಕೋಲ್ಹಾರ ಪಟ್ಟಣ ಪಂಚಾಯತ | ಅಮೃತ್ 2.0 ಯೋಜನೆಯಡಿ ಕೋಲ್ಹಾರ ಪಟ್ಟಣಕ್ಕೆ ನೀರು ಸರಬರಾಜು ವಿತರಣಾ ಜಾಲ ವ್ಯವಸ್ಥೆ ಕಲ್ಪಿಸುವ ಯೋಜನೆ | 28.03.2023 ರಿಂದ 27.09.2024 ವರೆಗೆ (18 ತಿಂಗಳುಗಳು) | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 7 | ವಿಜಯಪುರ ಮಹಾನಗರ ಪಾಲಿಕೆ | 2021-22 ನೇ ಸಾಲಿನ 15 ನೇ ಹಣಕಾಸು ಯೋಜನೆ ಅಡಿಯಲ್ಲಿ ಕೋಲ್ಹಾರ ಶುದ್ಧ ನೀರೆತ್ತುವ ಪಂಪಿನ ಮನೆಯಿಂದ ಮುಳವಾಡ ಐ.ಪಿ.ಎಸ್. ರವರೆಗೆ ಹಾಲಿ ಇರುವ 965 ಮಿ.ಮೀ. ವ್ಯಾಸದ ಓ.ಡಿ. ಎಮ್.ಎಸ್. ಪೈಪ್‌ಲೈನ್ ಅನ್ನು ವಿವಿಧ ಚೈನೇಜ್‌ಗಳಲ್ಲಿ ಬದಲಾಯಿಸುವ ಕಾಮಗಾರಿ | 04.02.2023 ರಿಂದ 03.08.2023 (6 ತಿಂಗಳುಗಳು) | • ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಕಾರಣಗಳು ಕೆಳಗಿನಂತಿವೆ.<br>1)2023 ನೇ ಸಾಲಿನ ಸಾರ್ವತ್ರಿಕ ಚುನಾವಣೆಯಿಂದ ನೀತಿ ಸಂಹಿತೆ ಜಾರಿ<br>2) ಸರ್ಕಾರದ ಆದೇಶ ದಿನಾಂಕ: 22.05.2023 ಮತ್ತು 28.06.2023ಗಳಲ್ಲಿ ಚಾಲನೆಯಾಗದಿರುವ ಕಾಮಗಾರಿಗಳನ್ನು ಪ್ರಾರಂಭ ಮಾಡದೇ ಇರುವ ಕುರಿತು ಆದೇಶಾನುಸಾರ<br>3) ಗುತ್ತಿಗೆದಾರರ ಮಂದಗತಿ ಪ್ರಗತಿಯ<br>• ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಟೆಂಡರ್ ದಾರರಿಗೆ ನೋಟೀಸ್ ನ್ನು ನೀಡಲಾಗಿರುತ್ತದೆ. |
| 8 | ವಿಜಯಪುರ ಮಹಾನಗರ ಪಾಲಿಕೆ | ಸನ್ 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಡಿ, ವಿಜಯಪುರದಿಂದ ಅಥಣಿ ರಸ್ತೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ.ಯ ಹೊಸ ಪಂಪ್‌ಹೌಸ್‌ದಿಂದ ಸಿವ್ಹಿಲ್ ಆಸ್ಪತ್ರೆಯ ಆವರಣದಲ್ಲಿರುವ ಮೇಲ್ಮಟ್ಟ ಜಲಸಂಗ್ರಹಾರದ ವರೆಗಿನ ಚೈನೇಜ್ 0.00 ಮೀ. ನಿಂದ ಚೈನೇಜ್ 538.00 ಮೀ. ನಲ್ಲಿ ಹಾಲಿ ಇರುವ 450 ಮಿ.ಮೀ. ವ್ಯಾಸದ ಸಿ.ಐ. ಕೊಳವೆಯನ್ನು ಸ್ಥಳಾಂತರಿಸಿ, 457 ಮಿ.ಮೀ. ವ್ಯಾಸದ 6.4 ಮಿ.ಮೀ. ದಪ್ಪದ, ಎಮ್.ಎಸ್. ಕೊಳವೆಯನ್ನು ಒದಗಿಸಿ, ಅಳವಡಿಸಿ, ಜೋಡಿಸಿ, ಪರಿಕ್ಷೀಸಿ ಮತ್ತು ಚಾಲನೆಗೊಳಿಸುವ ಕಾಮಗಾರಿ. | 28.09.2021 ರಿಂದ 27.01.2022 (4 ತಿಂಗಳುಗಳು) | • ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.<br>• ಟೆಂಡರ್ ದಾರರು ಕಾಮಗಾರಿಯನ್ನು ಕೈಗೊಳ್ಳದೇ ಇರುವುದರಿಂದ, ಟೆಂಡರ್ ಕಾಮಗಾರಿಯನ್ನು ದಿನಾಂಕ: 15.12.2022 ರದ್ದುಗೊಳಿಸಲಾಗಿದೆ.<br>ಪ್ರಸ್ತುತ, ಚಾಲನೆಯಲ್ಲಿರುವ ದರಪಟ್ಟಿಗಳಂತೆ ಅಂದಾಜು ಪತ್ರಿಕೆಯನ್ನು ತಯಾರಿಸಲಾಗುತ್ತಿದೆ. |

| ಕ್ರ. ಸಂ. | ಸ್ಥಳೀಯ ಸಂಸ್ಥೆ | ಕಾಮಗಾರಿ | ಕಾಮಗಾರಿಗೆ ನಿಗದಿಪಡಿಸಿದ ಅವಧಿ (ದಿ.... ರಿಂದ ... ವರೆಗೆ) | ಕಾಮಗಾರಿ ಪೂರ್ಣಗೊಂಡಿದೆಯೇ? ಇಲ್ಲದಿದ್ದಲ್ಲಿ ಪೂರ್ಣಗೊಳ್ಳದಿರಲು ಕಾರಣ ಮತ್ತು ಟೆಂಡರ್ ದಾರರ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ. |
|---|---|---|---|---|
| 9 | ವಿಜಯಪುರ ಮಹಾನಗರ ಪಾಲಿಕೆ | ಸನ್ 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಡಿ, ವಿಜಯಪುರದಿಂದ ಅಥಣಿ ರಸ್ತೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ.ಯ ಹೊಸ ಪಂಪ್‌ಹೌಸ್‌ದಿಂದ ಸಿವ್ಹಿಲ್ ಆಸ್ಪತ್ರೆಯ ಆವರಣದಲ್ಲಿರುವ ಮೇಲ್ಮಟ್ಟ ಜಲಸಂಗ್ರಹಾರದ ವರೆಗಿನ ಚೈನೇಜ್ 538.00 ಮೀ. ನಿಂದ ಚೈನೇಜ್ 1074.00ಮೀ. ನಲ್ಲಿ ಹಾಲಿ ಇರುವ 450 ಮಿ.ಮೀ. ವ್ಯಾಸದ ಸಿ.ಐ. ಕೊಳವೆಯನ್ನು ಸ್ಥಳಾಂತರಿಸಿ, 457 ಮಿ.ಮೀ. ವ್ಯಾಸದ 6.4 ಮಿ.ಮೀ. ದಪ್ಪದ, ಎಮ್.ಎಸ್. ಕೊಳವೆಯನ್ನು ಒದಗಿಸಿ, ಅಳವಡಿಸಿ, ಜೋಡಿಸಿ, ಪರಿಕ್ಷೀಸಿ ಮತು ಚಾಲನೆಗೊಳಿಸುವ ಕಾಮಗಾರಿ. | 28.09.2021 ರಿಂದ 27.01.2022 (4 ತಿಂಗಳುಗಳು) | • ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.<br>• ಟೆಂಡರ್ ದಾರರು ಕಾಮಗಾರಿಯನ್ನು ಕೈಗೊಳ್ಳದೇ ಇರುವುದರಿಂದ, ಟೆಂಡರ್ ಕಾಮಗಾರಿಯನ್ನು ದಿನಾಂಕ: 15.12.2022 ರದ್ದುಗೊಳಿಸಲಾಗಿದೆ.<br>ಪ್ರಸ್ತುತ, ಚಾಲನೆಯಲ್ಲಿರುವ ದರಪಟ್ಟಿಗಳಂತೆ ಅಂದಾಜು ಪತ್ರಿಕೆಯನ್ನು ತಯಾರಿಸಲಾಗುತ್ತಿದೆ. |

ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.